ಸಿ.ಸಿ .ನಂ. 191/2022 ಪಿಡಬ್ಲೂಃ 1

ದಿನಾಂಕಃ 20-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

8. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾವು ಆರೋಪಿಗೆ ಒಂದು ಬಾರಿ ವಕೀಲರ ಮುಖಾಂತರ ನೋಟಿಸನ್ನು ಕೊಟ್ಟಿರುತ್ತೇವೆ . ಸದರಿ ನೋಟಿಸನ್ನು ದಿಃ 07-09-2021 ರಂದು ಕೊಟ್ಟಿರುತ್ತೇವೆ . ಸದರಿ ನೋಟಿಸು ಮುಟ್ಟಿರುತ್ತದೆ . ನೋಂದಾಯಿತ ಅಂಚೆ ಕಳುಹಿಸಿದ ಸಂದರ್ಭದಲ್ಲಿ ಸದರಿ ಅಂಚೆಯನ್ನು ಸ್ವೀಕರಿಸಿದ ದಿನಾಂಕವನ್ನು ಅಂಚೆ ಸ್ವೀಕೃತಿ ಪತ್ರದಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ . ನಿಪಿ-6 ಅಂಚೆ ಸ್ವೀಕೃತಿ ಪತ್ರದಲ್ಲಿ ದಿಃ 09-09-2021 ರಂದು ಅಂಚೆ ಜಾರಿಯಾದ ಬಗ್ಗೆ ನಮೂದು ಮಾಡುತ್ತಾರೆ ಎಂದರೆ ಸರಿ . ಪವಿತ್ರಾ ನಾಗರಾಜ ತಾಂಡೇಲ ಎಂಬ ಹೆಸರಿನ ಎಷ್ಟು ಜನರು ಗಂಗೆಕೊಳ್ಳ ಊರಿನಲ್ಲಿ ಇದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ . ಸದರಿ ಅಂಚೆ ಆರೋಪಿಗೆ ತಲುಪಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ . ಈ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ನಾನು ಫಿರ್ಯಾದುದಾರ ಶಾಖೆಯ ವ್ಯವಸ್ಥಾಪಕನಾಗಿರಲಿಲ್ಲ ಎಂದರೆ ಸರಿ . ನಾನು ಈಗ್ಗೆ ಒಂದುವರೆ ವರ್ಷಗಳ ಹಿಂದೆ ಫಿರ್ಯಾದುದಾರ ಸಂಸ್ಥೆಗೆ ಸೇರಿರುತ್ತೇನೆ . ಫಿರ್ಯಾದಿಯಲ್ಲಿ ಸದರಿ ನೋಟಿಸು ದಿಃ 13-09-2021 ಎಂದು ಜಾರಿಯಾಗಿರುತ್ತದೆ ಎಂದು ಯಾವ ಕಾರಣಕ್ಕಾಗಿ ನಮೂದು ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಈ ಪ್ರಕರಣ ಅವಧಿ ಮೀರಿದ ಪ್ರಕರಣ ಎಂದು ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂದು ಫಿರ್ಯಾದಿಯಲ್ಲಿ ದಿಃ 13-09-2021 ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ .

9. ವಕೀಲರ ನೋಟಿಸನ್ನು ತಯಾರಿಸಲು ನಮ್ಮ ಸಂಸ್ಥೆಯ ಪರವಾಗಿ ಕೊಟ್ಟಿರಬಹುದು , ಆದರೆ ಆ ರೀತಿ ಕೊಟ್ಟವರು ಯಾರು ಎಂದು ನನಗೆ ಗೊತ್ತಿಲ್ಲ . ಈ ಪ್ರಕರಣದಲ್ಲಿ ಯಾರು ಮಾಹಿತಿ ಕೊಟ್ಟು

ತಯಾರಿಸಿರುವ ನೋಟಿಸನ್ನು ಹಾಜರು ಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ನೋಟಿಸು ಫಿರ್ಯಾದಿದಾರ ಸಂಸ್ಥೆಯ ಪರವಾಗಿ ಕೊಟ್ಟಿರುವ ನೋಟಿಸೋ ಅಥವಾ ಅವರ ವೈಯಕ್ತಿಕ ನಾತೆಯಿಂದ ಕೊಟ್ಟಿರುವ ನೋಟಿಸೋ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಈಗ ನಾನು ಪ್ರತಿನಿಧಿಸುತ್ತಿರುವ ಸಂಸ್ಥೆಯ ಹೆಸರು ಶ್ರೀ ಜಯಲಕ್ಷ್ಮೀ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ ಆಗಿರುತ್ತದೆ . ಫಿರ್ಯಾದುದಾರ ಸಂಸ್ಥೆ ಒಂದು ಸೌಹಾರ್ದ ಸಂಸ್ಥೆಯಾಗಿದ್ದು ಅದು ಯಾವತ್ತೂ ಸಂಘ ಆಗಿರಲಿಲ್ಲ ಎಂದರೆ ಸರಿ . ಶರತ್ ಗಣಪತಿ ನಾಯ್ಕರವರು ಅವರ ವೈಯಕ್ತಿಕ ನಾತೆಯಿಂದ ಕೊಟ್ಟಿರುವ ನೋಟಿಸನ್ನು ನಮ್ಮ ಸಂಸ್ಥೆಯ ಪರವಾಗಿ ಕಳುಹಿಸಿರುವ ನೋಟಿಸು ಎಂದು ತಪ್ಪಾಗಿ ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-7 ಸಾಲದ ಅರ್ಜಿ ನಮ್ಮ ಸಂಸ್ಥೆಯ ಪಾರ್ಮೆಟ್ ಎಂದರೆ ಸರಿ . ಒಂದು ಸಾಲದ ಅರ್ಜಿ ಬಂದಾಗ, ಸದಸ್ಯವಾರು ಸಾಲದ ಅಗತ್ಯತೆಯ ಯಾದಿಯನ್ನು ಅದರ ಜೊತೆಗೆ ಲಗತ್ತಿಸಬೇಕು ಎಂದರೆ ಸರಿ . ಸದರಿ ಸದಸ್ಯರಾರು ಸಾಲದ ಅಗತ್ಯತೆಯ ಯಾದಿಯನ್ನು ಸಂಘದವರು ಕೊಟ್ಟಿರುವುದಿಲ್ಲ. ಸಾಲದ ಅರ್ಜಿಯನ್ನು ಪುರಸ್ಕರಿಸಬೇಕಾದರೆ ಗುಂಪಿನ ಪರವಾಗಿ ಸಾಲ ಪಡೆಯಲು ಪ್ರತಿನಿಧಿಗಳಿಗೆ ಅಧಿಕಾರ ನೀಡಿದ ಸದಸ್ಯರ ಆಂತರಿಕ ಒಪ್ಪಂದ ಪತ್ರದ ಪ್ರತಿಯನ್ನು ಲಗತ್ತಿಸಬೇಕಾಗುತ್ತದೆ ಎಂದರೆ ಸರಿ . ಮೇಲೆ ಹೇಳಿದ ಸದಸ್ಯವಾರು ಅಗತ್ಯತೆಯ ಯಾದಿ ಹಾಗೂ ಆಂತರಿಕ ಒಪ್ಪಂದ ಪತ್ರ , ಸಂಘದ ಸದಸ್ಯರು ಠರಾವು ಮಾಡಿ ಸಹಿ ಮಾಡಿರುವ ದಾಖಲೆಗಳು ಎಂದರೆ ಸರಿ . ಸದರಿ ಎರಡು ದಾಖಲೆಗಳನ್ನು ಲಗತ್ತಿಸಲಾಗಿದೆ ಎಂದು ನಿಪಿ -7 ಸಾಲದ ಅರ್ಜಿಯಲ್ಲಿ ನಮೂದಾಗಿದೆ ಎಂದರೆ ಸರಿ. ಸದರಿ ಎರಡು ದಾಖಲೆಗಳು ಆರೋಪಿ ಸಂಘದಲ್ಲಿ ಠರಾವು ಆಗಿರುವ ದಾಖಲೆಗಳು ಎಂದರೆ ಸರಿ . ಅಂತಹ ದಾಖಲೆಗಳನ್ನು ಈ ಕೇಸಿನಲ್ಲಿ ನಾವು ಹಾಜರು ಮಾಡಿಲ್ಲ ಎಂದರೆ ಸರಿ .

10. ಸಾಲದ ಅರ್ಜಿಯಲ್ಲಿ ಸಂಘದ ಆರ್ಥಿಕ ಸ್ಥಿತಿ ಹೇಗಿದೆ ಎಂಬ ಬಗ್ಗ ನಮಾದು ಮಾಡಬೇಕಾಗಿದೆ ಎಂದರೆ ಸರಿ . ಸದರಿ ಅರ್ಜಿಯಲ್ಲಿ ಸಂಘದ ಆರ್ಥಿಕ ಸ್ಥಿತಿಯನ್ನು ನಮೂದು ಮಾಡಿರುವುದಿಲ್ಲ . ಸಾಲದ

ಅರ್ಜಿಯನ್ನು ಸ್ವೀಕರಿಸಿದ ತಕ್ಷಣ ಅದನ್ನು ಸ್ವೀಕರಿಸಲಾಗಿದೆ ಎಂದು ಅದರ ಮೇಲೆ ನಮ್ಮ ಸಂಸ್ಥೆಯ ಶಾಖಾ ವ್ಯವಸ್ಥಾಪಕರ ಸಹಿ ಮತ್ತು ಮೊಹರು ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಅಂತಹ ಸಾಲದ ಅರ್ಜಿ ಮಂಜೂರಾತಿಗೆ ಹೋದ ಸಂದರ್ಭದಲ್ಲಿ ಅದರಲ್ಲಿ ಶಾಖಾ ವ್ಯವಸ್ಥಾಪಕರ ಸಹಿ ಮತ್ತು ಮೊಹರು ಇರಲೇ ಬೇಕಾಗುತ್ತದೆ ಎಂದರೆ ಸರಿ . ನಿಪಿ-7 ರಲ್ಲಿ ಆ ರೀತಿ ಶಾಖಾ ವ್ಯವಸ್ಥಾಪಕರ ಸಹಿಯಾಗಲೀ, ಮೊಹರಾಗಲೀ ಇರುವುದಿಲ್ಲ ಎಂದರೆ ಸರಿ. ಒಂದು ಸಾಲಕ್ಕೆ ಅರ್ಜಿ ಬಂದಾಗ ಅದನ್ನು ಪರಿಶೀಲಿಸಿ ಪುರಸ್ಕರಿಸುವ ಅಧಿಕಾರಿಗಳು ನಮ್ಮ ಸಂಸ್ಥೆಯಲ್ಲಿ ಇರುತ್ತಾರೆ ಎಂದರೆ ಸರಿ . ಈ ಕೇಸಿನ ಸಾಲದ ಅರ್ಜಿಯನ್ನು ಪರಿಶೀಲಿಸಿದವರು ಹಾಗೂ ಪುರಸ್ಕರಿಸಿದ ಅಧಿಕಾರಿಗಳು ಯಾರು ಎಂದು ನನಗೆ ಗೊತ್ತಿಲ್ಲ . ಒಂದುವೇಳೆ ಸಾಲದ ಅರ್ಜಿಯನ್ನು ಪರಿಶೀಲನೆ ಮಾಡಿದ್ದಲ್ಲಿ ನಿಪಿ -8 ಸ್ವಸಹಾಯ ಗುಂಪಿಗೆ ಸಾಲ ನೀಡಿಕೆ ಶಿರೋನಾಮೆಯಲ್ಲಿರುವ ದಾಖಲೆಯಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ .

11. ಒಂದು ಸಂಘಕ್ಕೆ ಸಾಲವನ್ನು ನೀಡುವ ಸಂದರ್ಭದಲ್ಲಿ ಅದರ ಆರ್ಥಿಕ ಸ್ಥಿತಿಯನ್ನು ಪರಿಶೀಲನೆ ಮಾಡಲು ಅದರ ಕನಿಷ್ಟ ಆರು ತಿಂಗಳ ಪೂರ್ವದಲ್ಲಿ ಸದರಿ ಸಂಘ ರಚನೆಯಾಗಿರಬೇಕು ಎಂದರೆ ನನಗೆ ಗೊತ್ತಿಲ್ಲ. ಆರು ತಿಂಗಳ ಒಳಗೆ ಇರುವ ಸಂಘದ ಸಾಲದ ಅರ್ಜಿಯನ್ನು ಪುರಸ್ಕರಿಸಲು ಆಗುವುದಿಲ್ಲ ಎಂದರೆ ಸರಿ . ಆರೋಪಿಯ ಸಂಘ ಯಾವ ದಿನಾಂಕಕ್ಕೆ ಅಸ್ತಿತ್ವಕ್ಕೆ ಬಂತು ಎಂದು ನನಗೆ ಹೇಳಲು ಆಗುವುದಿಲ್ಲ . ಆರೋಪಿ ಸಂಘದ ಉಳಿತಾಯ ಖಾತೆಯಲ್ಲಿರುವ ಹಣವನ್ನು ಪರಿಶೀಲನೆ ಮಾಡಿ ನಿಪಿ -8 ರಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಒಂದು ಸಂಘದ ಆರ್ಥಿಕ ಸ್ಥಿತಿಗತಿಯನ್ನು ಪರಿಶೀಲನೆ ಮಾಡಿ ನಾವು ಶ್ರೇಣಿಯನ್ನು ಕೊಡುತ್ತೇವೆ ಎಂದರೆ ಸರಿಯಲ್ಲ. ಸಂಘದ ಆರ್ಥಿಕ ಸ್ಥಿತಿಗತಿಯನ್ನು ಪರಿಶೀಲನೆ ಮಾಡಿರುತ್ತೇನೆ ಎಂದು ಸಾಲದ ಅರ್ಜಿಯನ್ನು ಪರಿಶೀಲನೆ ಮಾಡಿದ ಅಧಿಕಾರಿಯು ನಿಪಿ -8 ರಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಅದೇ ರೀತಿ ನಿಪಿ -8 ರಲ್ಲಿ ಗುಂಪನ್ನು ಶ್ರೇಣಿಕರಿಸಲಾಗಿದೆ ಎಂದು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . 'ಎ' ಶ್ರೇಣಿಯ ಸಂಘಗಳಿಗೆ ಮಾತ್ರ ಸಾಲವನ್ನು

ಪಡೆಯಲು ಅರ್ಹರಾಗಿರುತ್ತಾರೆ ಎಂದರೆ ಸರಿ . 'ಬಿ ' ಅಥವಾ 'ಸಿ ' ಶ್ರೇಣಿಯ ಸಂಘಗಳು ಸಾಲವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿ . ನಿಪಿ-8 ಸಾಲ ಮಂಜೂರು ಮಾಡಲು ಪರಿಷ್ಕರಣೆ ಮಾಡಿದ ಬಗ್ಗೆ ನೀಡಿದ ದಾಖಲೆ ಎಂದರೆ ಸರಿ . ನಿಪಿ-8 ರಲ್ಲಿ ಶ್ರೇಣೀಕರಣ ಮಾಡಿದ ಬಗ್ಗೆಯಾಗಲೀ , ಪರಿಷರಣೆ ಮಾಡಿದ ಬಗ್ಗೆಯಾಗಲೀ ನಮೂದು ಮಾಡಿಲ್ಲ ಎಂದರೆ ಸರಿ . ಅದೇ ರೀತಿ ಈ ಅರ್ಜಿ ಸಾಲವನ್ನು ನೀಡಲು ಯೋಗ್ಯವಾಗಿದೆ ಎಂಬ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ ಎಂದರೆ ಸರಿ . ಈ ಸಾಲದ ಅರ್ಜಿ ಸಾಲವನ್ನು ನೀಡಲು ಯೋಗ್ಯವಾಗಿದೆ ಎಂದು ನಿಪಿ-8 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ . ಶ್ರೇಣೀಕರಣ ಮಾಡಿದ ಬಗ್ಗೆ ಶೇಕಡಾವಾರು ಅಂಕಗಳನ್ನು ನೀಡಿರುವ ಬಗ್ಗೆ ನಿಪಿ-8 ರಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಸಾಲದ ಅರ್ಜಿಯನ್ನು ಪರಿಶೀಲನೆ ಮಾಡುವ ದಿನಾಂಕದವರೆಗೂ ಸಂಘದ ಉಳಿತಾಯ ಖಾತೆಯಲ್ಲಿ ಎಷ್ಟು ಹಣ ಇದೆ ಎಂಬುದನ್ನು ನಿಪಿ -8 ರಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಸಾಮಾನ್ಯವಾಗಿ ಸಾಲದ ಅರ್ಜಿಯನ್ನು ಪರಿಶೀಲನಾ ಅಧಿಕಾರಿಯು ಪರಿಶೀಲನೆ ಹಾಗೂ ಪರಿಷ್ಕರಣೆ ಮಾಡದೇ ಇದ್ದ ಸಂದರ್ಭದಲ್ಲಿ ಅಂತಹ ಅರ್ಜಿ ಪುರಸ್ಕೃತವಾಗುವುದಿಲ್ಲ ಎಂದರೆ ಸರಿ . ನಿಪಿ-8 ರಲ್ಲಿ ಪರಿಶೀಲನೆ ಮತ್ತು ಪರಿಷ್ಕರಣೆ ಮಾಡಿದ ಅಧಿಕಾರಿಯು ತನ್ನ ಸಹಿ ಮತ್ತು ಮೊಹರನ್ನು ಹಾಕಬೇಕಾಗುತ್ತದೆ ಎಂದರೆ ಸರಿ . ನಿಪಿ-8 ರಲ್ಲಿ ಎಲ್ಲಿಯೂ ಸಹ ಪರಿಶೀಲನೆ ಹಾಗೂ ಪರಿಷ್ಕರಣೆ ಮಾಡಿದ ಅಧಿಕಾರಿಯ ಸಹಿಯಾಗಲೀ , ಮೊಹರಾಗಲೀ ಇಲ್ಲ ಎಂದರೆ ಸರಿ .

12. ಒಂದು ವೇಳೆ ಸಾಲ ಮಂಜೂರಾದಲ್ಲಿ ಮಂಜೂರಾತಿ ಶರತ್ತಿನಲ್ಲಿ ಎಷ್ಟು ಹಣ ಮಂಜೂರು ಮಾಡಲಾಗಿದೆ , ಎಷ್ಟು ತಿಂಗಳ ಅವಧಿಗೆ ಸಾಲವನ್ನು ನೀಡಲಾಗಿದೆ ಹಾಗೂ ಎಷ್ಟು ಬಡ್ಡಿ ಆಕರಣೆ ಮಾಡುವುದು ಎಂಬ ಬಗ್ಗೆ ನಿಪಿ -8 ರಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಆ ರೀತಿ ನಮೂದು ಮಾಡಿದ ನಂತರ ಅದಕ್ಕೆ ನಮ್ಮ ಶಾಖೆಯ ವ್ಯವಸ್ಥಾಪಕರ ಹಾಗೂ ಆಡಳಿತ ಮಂಡಳಿಯವರ ಸಹಿಗಳು ಹಾಕಬೇಕಾಗುತ್ತದೆ ಎಂದರೆ ಸರಿ . ನಿಪಿ-8 ರಲ್ಲಿ ಮೇಲೆ ಹೇಳಿದ ಯಾವುದೇ ವಿಷಯ ನಮೂದಾಗಿಲ್ಲ ಎಂದರೆ ಸರಿ . ನಿಪಿ-8 ರಲ್ಲಿ ನಮ್ಮ ಶಾಖಾ ವ್ಯವಸ್ಥಾಪಕರ ಹಾಗೂ ಆಡಳಿತ

ಮಂಡಳಿಯವರು ಸಹಿಗಳಾಗಲೀ , ಮೊಹರುಗಳಾಗಲೀ ಇಲ್ಲ ಎಂದರೆ ಸರಿ . ಡಿಮಾಂಡ ಪ್ರಾಮಿಸರಿ ನೋಟನ್ನು ತೆಗೆದುಕೊಳ್ಳುವಾಗ ಅಸಲು, ಬಡ್ಡಿದರ , ದಂಡದ ಬಡ್ಡಿ ಹಾಗೂ ಸಾಲದ ದಿನಾಂಕವನ್ನು ನಮೂದು ಮಾಡಿ ತೆಗೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಒಂದುವೇಳೆ ಆ ರೀತಿ ತೆಗೆದುಕೊಂಡಿದ್ದಲ್ಲಿ ಅಂತಹ ಡಿಮಾಂಡ ಪ್ರಾಮಿಸರಿ ನೋಟಿನಲ್ಲಿ ನಮ್ಮ ಶಾಖಾ ವ್ಯವಸ್ಥಾಪಕರ ಸಹಿ ಹಾಗೂ ಮೊಹರು ಇರಬೇಕಾಗುತ್ತದೆ ಎಂದರೆ ಸರಿ . ಅದೇ ರೀತಿ ಯಾವ ಖಾತೆಯ ನಂಬರ ಎಂದು ಡಿಮಾಂಡ ಪ್ರಾಮಿಸರಿ ನೋಟಿನಲ್ಲಿ ಖಾತೆ ನಂಬರನ್ನು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಸಾಲ ನೀಡುವ ಸಂದರ್ಭದಲ್ಲಿ ಪಡೆದುಕೊಳ್ಳಬೇಕಾದ ಎಲ್ಲಾ ದಾಖಲೆಗಳಲ್ಲಿ ನಮ್ಮ ಶಾಖಾ ವ್ಯವಸ್ಥಾಪಕರ ಸಹಿ ಹಾಗೂ ಮೊಹರು ಇರಬೇಕಾಗುತ್ತದೆ ಎಂದರೆ ಸರಿ . ಈ ಕೇಸಿನಲ್ಲಿ ನಿಶಾನೆಯಾಗಿ ಗುರುತಿಸಿರುವ ಯಾವುದೇ ದಾಖಲೆಗಳಲ್ಲಿ ಆ ರೀತಿ ನಮ್ಮ ಶಾಖಾ ವ್ಯವಸ್ಥಾಪಕರ ಸಹಿಯಾಗಲೀ, ಮೊಹರಾಗಲೀ ಇಲ್ಲ ಎಂದರೆ ಸರಿ.

13. ನಿಮ್ಮ ಪ್ರಕಾರ ಆರೋಪಿಗೆ ನಿಮ್ಮ ಸಂಸ್ಥೆಯಲ್ಲಿ ಸಾಲಗಾರರಾಗಿ ಹಾಗೂ ಜಾಮೀನುದಾರರಾಗಿ ಎಷ್ಟು ಸಾಲಗಳು ಇವೆ ಎಂದರೆ ಒಂದು ಸಾಲ ಇದೆ ಎಂದು ನುಡಿಯುತ್ತಾರೆ . ಸದರಿ ಸಾಲದ ಖಾತೆಯ ನಂಬರ ನನಗೆ ನೆನಪಿಲ್ಲ. ಈ ಪ್ರಕರಣದ ಸಾಲದ ಖಾತೆಯ ನಂಬರ 179 ಆಗಿರುತ್ತದೆ . ಗಣಕೀಕರಣ ಜ್ಞಾನ ಇದ್ದವರು ನಿಪಿ-13 ಸಾಲದ ಖಾತೆಯ ಉತಾರವನ್ನು ಆರಾಮವಾಗಿ ಸೃಷ್ಟಿ ಮಾಡಬಹುದು ಎಂದರೆ ಸರಿ . ನಿಪಿ-13 ಆರೋಪಿಗೆ ಸಂಬಂಧಪಟ್ಟದ್ದು ಅಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.